

## ಅಂತರ್ಜಾಲದಲ್ಲಿ ಮಕ್ಕಳು ಏನನ್ನು ಮಾಡಬಾರದು?

- ತಮ್ಮ ಸಂಪೂರ್ಣ ಹೆಸರು, ವಿಳಾಸ, ಫೋನ್ ನಂಬರ್, ಬ್ಯಾಂಕ್ ಅಥವಾ ಕ್ರೆಡಿಕ್ ಕಾರ್ಡ್ ಸಂಖ್ಯೆಯನ್ನು ಹಂಚಿಕೊಳ್ಳಬಾರದು.
- ತಮ್ಮ ಖಾಸಗಿ ಮಾಹಿತಿಯಿರುವ ಪುಟಗಳಿಗೆ ಎಲ್ಲರಿಗೂ ಪ್ರವೇಶ ನೀಡಬಾರದು.
- ತಮ್ಮ ಭಾವಚಿತ್ರವನ್ನು ಹಾಕಿಕೊಳ್ಳುವ ಅಗತ್ಯವಿಲ್ಲ. ಅದನ್ನು ಅಶ್ಲೀಲ ವೆಬ್‌ಸೈಟ್‌ಗಳಲ್ಲಿ ಬಳಸಿಕೊಳ್ಳುವ ತೊಂದರೆಯಿದೆ.
- ತಮ್ಮ ಪ್ರಯಾಣ, ತಿರುಗಾಟದ ವಿವರವನ್ನು ಹಂಚಿಕೊಳ್ಳುವ ಅಗತ್ಯವಿಲ್ಲ.
- ಎಲ್ಲರೊಂದಿಗೆ ಕುಳಿತುಕೊಂಡು ಓದಲಾಗದ, ನೋಡಲಾಗದ ಚಿತ್ರಗಳನ್ನು ಹಂಚಿಕೊಳ್ಳಬಾರದು.

ತಮಗೆ ಪರಿಚಯವಿಲ್ಲದ, ಕೇಳಿಯೂ ಇರದ ವ್ಯಕ್ತಿಗಳಿಂದ ಫ್ರೆಂಡ್ ರಿಕ್ವೆಸ್ಟ್ ಬಂದಲ್ಲಿ ಸ್ವೀಕರಿಸಬಾರದು. ಒಂದು ವೇಳೆ ಸ್ನೇಹಿತರಾದರೂ ಅವರ ಕೊಳಕು ಪ್ರವೃತ್ತಿಯ ಮನವರಿಕೆಯಾದರೆ ಕೂಡಲೆ 'ಅನ್‌ಫ್ರೆಂಡ್' ಮಾಡಿಬಿಡಬೇಕು, ಪೋಷಕರೊಂದಿಗೆ ಈ ವಿಷಯ ಹಂಚಿಕೊಳ್ಳಬೇಕು.

ತಮ್ಮ ಸ್ನೇಹಿತರ ವಲಯದಲ್ಲಿ ಯಾರಾದರೂ ಅಶ್ಲೀಲ ಅಥವಾ ಕೊಳಕು ಸಂದೇಶಗಳನ್ನು ಕಳುಹಿಸಿದರೆ ಅದನ್ನೂ ಪೋಷಕರ ಗಮನಕ್ಕೆ ತರಬೇಕು.

ಯಾರೇ ಆಗಲಿ ಖಾಸಗಿ ವಿವರಗಳನ್ನು ಕೇಳಿದರೆ ಖಂಡಿತವಾಗಿಯೂ ಹೇಳಿಕೊಳ್ಳಬಾರದು. ಚಿತ್ರ ಕಳುಹಿಸಲು ಒತ್ತಾಯಿಸುವುದು, ಈ ಸಂಪರ್ಕವನ್ನು ಬಳಸಿಕೊಂಡು ಭೇಟಿಯಾಗಲು ಯತ್ನಿಸುವುದು, ಫೋನ್ ಮೂಲಕ ಮಾತನಾಡುವ ಪ್ರಯತ್ನ ಮಾಡಿದರೆ ಅಂತಹವರ ಜೊತೆಗಿನ ಸಂಪರ್ಕವನ್ನೇ ಕಡಿದುಕೊಳ್ಳಬೇಕು.

ಸರಕಾರವೂ ಇಂತಹ ಆಕ್ಷೇಪಾರ್ಹ ಜಾಲತಾಣಗಳ ವಿರುದ್ಧ ನಿಯಂತ್ರಣ ಹೇರುತ್ತಿದೆ. ಮನೆಗಳಲ್ಲಿ ಕಂಪ್ಯೂಟರ್‌ಗೂ 'ಚೈಲ್ಡ್ ಲಾಕ್' ಹಾಕಬಹುದಾದಂತಹ ಅನೇಕ ತಾಂತ್ರಿಕ ನಿಯಂತ್ರಣಗಳು ಲಭ್ಯವಿವೆ. ಮೊಬೈಲ್‌ಗಳಲ್ಲೂ 'ಲಾಕ್' ವ್ಯವಸ್ಥೆ ಇದೆ. ಅದೂ ಅಲ್ಲದೆ ಮಕ್ಕಳ ಮೊಬೈಲ್ ಬಳಕೆಯ 'ಟ್ರೇಸಿಂಗ್' ಸೌಕರ್ಯವೂ ಇಂದಿನ ಮೊಬೈಲ್‌ಗಳಲ್ಲಿದೆ. ಪೊಲೀಸ್ ಮತ್ತು ಕಾನೂನು ವ್ಯವಸ್ಥೆಯೂ ಸೈಬರ್ ಅಪರಾಧಗಳ ಬಗೆಗೆ ಹೆಚ್ಚು ಹೆಚ್ಚು ಜಾಗೃತವಾಗಿದೆ, ಆ ನಿಟ್ಟಿನಲ್ಲಿ ಅನೇಕ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳುತ್ತಿದೆ.

ಆದರೆ ಇಷ್ಟೇ ಸಾಕೇ? ಇದರ ಹೊರತಾಗಿ ಪೋಷಕರೂ ಈ ನಿಟ್ಟಿನಲ್ಲಿ ಮಕ್ಕಳನ್ನು ಸರಿದಾರಿಗೆ ತರಲು ಪ್ರಯತ್ನ ಪಡಬೇಡವೇ? ಅವರ ಜವಾಬ್ದಾರಿ ಇಲ್ಲವೇ?

ಹೆಚ್ಚಿನ ಮಕ್ಕಳು ತಮ್ಮ ಪೋಷಕರಲ್ಲಿ ಮೊಬೈಲ್‌ಗಾಗಿ ಪೀಡಿಸುತ್ತಾರೆ. ಅದೂ ಸ್ಮಾರ್ಟ್ ಫೋನ್‌ಗಾಗಿ. ಫೋನ್ ಕೊಡಿಸಿದ ಬಳಿಕ ಅದರಲ್ಲಿ ಇಂಟರ್‌ನೆಟ್ ಪ್ಯಾಕ್ ಬೇಕೇ ಬೇಕು ಎಂದು ಒತ್ತಾಯ ಹೇರಿ ಹಾಕಿಸಿಕೊಳ್ಳುವುದುಂಟು. ಪೋಷಕರು ಇಂಟರ್‌ನೆಟ್ ಸೌಲಭ್ಯಕ್ಕೆ ದುಡ್ಡು ಕೊಡಲಿಲ್ಲ ಎಂದಿಟ್ಟುಕೊಳ್ಳಿ. ಅದಕ್ಕೆ ದುಡ್ಡು ಹೊಂದಿಸಲೆಂದೇ ಮಕ್ಕಳು ಕಳ್ಳದಾರಿ ಹಿಡಿಯುವುದಿದೆ. ಇತ್ತೀಚೆಗೆ ವರದಿಯಾದ ಒಂದು ಪ್ರಕರಣದಲ್ಲಿ ತನ್ನ ಪೋಷಕರು ಪ್ರತಿದಿನ ಊಟಕ್ಕೆಂದು ಕೊಟ್ಟ ಹಣವನ್ನು, ಮಧ್ಯಾಹ್ನದ ಊಟವನ್ನೂ ಮಾಡದೆ ಮೊಬೈಲ್ ಚಾರ್ಜಿಂಗ್‌ಗೆ ಬಳಸಿದ ಹೈಸ್ಕೂಲ್ ಹುಡುಗಿಯೊಬ್ಬಳ ವಿವರಗಳಿದ್ದವು! ಆಕೆ ಒಂದು ವರ್ಷದಿಂದ ಮಧ್ಯಾಹ್ನದ ಊಟವನ್ನೇ ಬಿಟ್ಟಿದ್ದಳಂತೆ!

ಎಷ್ಟೋ ಪೋಷಕರಿಗೆ ತಮ್ಮ ಮಕ್ಕಳ ಮೊಬೈಲ್‌ನಲ್ಲಿ ಇಂಟರ್‌ನೆಟ್ ಇರುವುದೇ ಗೊತ್ತಿರುವುದಿಲ್ಲ. ಮಕ್ಕಳು ಇಡೀ ಹೊತ್ತು ಮೊಬೈಲ್ ಅಥವಾ ಕಂಪ್ಯೂಟರ್‌ನಲ್ಲೇ ತೊಡಗಿರುತ್ತಾರೆ. ತಮ್ಮಷ್ಟಕ್ಕೆ ನಗುವುದು, ಜೋಕ್

